ಸಿಸಿ ನಂಃ 3708/2022
ಪಿ.ಡಬ್ಲ್ಯೂ-3 ಸಿ ಡಬ್ಲ್ಯೂ-3

ಸಾಕ್ಷಿಯನ್ನು ದಿಃ **07.05.2025** ರಂದು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲುಃ ಆರೋಪಿ ಪರ ವೈ ಆರ್ ಹೆಚ್ ವಕೀಲರಿಂದ.

ನಾನು ದ್ವಿತೀಯ ಪಿಯುಸಿ ವರೆಗೆ ಓದಿರುತ್ತೇನೆ. ಯಾವುದೇ ಗಲಾಟೆಗಳು ಆದರೆ ಪೋಲಿಸ್ ಠಾಣೆಗೆ ದೂರು ನೀಡಬೇಕು ಎಂದು ನನಗೆ ಗೊತ್ತು . ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ನಾನು ಯಾವುದೇ ದೂರನುನ ನೀಡಿರುವುದಿಲ್ಲ. ನನ್ನ ಪ್ರಕಾರ ನಾನು ಗಲಾಟೆಯಲ್ಲಿ ಬಾಗಿರುವುದಿಲ್ಲ. ಗಲಾಟೆ ಆಗಿದೆ ಎನ್ನುವ ಸಮಯದಲ್ಲಿ ನನ್ನ ಗಂಡ ಇದ್ದಿಲ್ಲ. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ದೂರನ್ನು ಯಾರು ಬರೆದು ನೀಡಿದ್ದಾರೆ ನನಗೆ ಗೊತಿಲ್ಲ. ದೂರನ್ನು ನೀಡಲು ನಾನು ಚಾಸಾ-1 ರವರಲ್ಲಿಗೆ ಹೋಗಿರುವುದಿಲ್ಲ. ದೂರನ್ನು ನೀಡುವ ದಿನ ದೂರಿನಲ್ಲಿ ಏನು ಬರೆದಿದೆ ಎಂದು ಆ ಕ್ಷಣಕ್ಕೆ ನನಗೆ ಗೊತಿರಲಿಲ್ಲ. ಗಲಾಟೆ ಆಗಿದೆ ಎನ್ನುವ ಸ್ಥಳದ ಅಕ್ಕ ಪಕ್ಕ ಸಾಕಷ್ಟು ಮನೆಗಳು ಇವೆ ಎಂದರೆ ಸರಿ.

ಗಲಾಟೆ ಆಗಿದೆ ಎನುವ ಸ್ಥಳದ ಪಶ್ಚಿಮಕ್ಕೆ ಅಶೋಕರವರ ಅಂಗಡಿ ಇದೆ ಎಂದರೆ ಸರಿ. ಸಾಮಾನ್ಯವಾಗಿ ಗಲಾಟೆ ಆದರೆ ಸುತ್ತಮುತ್ತ ಜನ ಸೇರಿಕೊಳ್ಳುತ್ತಾರೆ ಎಂದರೆ ಸರಿ. ದಿಃ 17.02.2022 ರಂದು ಆಗಿರುವ ಗಲಾಟೆ ದಿನ ಸಾಕಷ್ಟು ಜನ ಸೇರಿದ್ದರು ಎಂದರೆ ಸರಿ. ಪೋಲಿಸರು ಸ್ಥಳಕ್ಕೆ ಬಂದಾಗ ದೂರನ್ನು ನೀಡಲು ತೊಂದರೆ ಇರಲಿಲ್ಲ. ಗಲಾಟೆ ಆದ ಕ್ಷಣದಲ್ಲಿ ಚಾಸಾ -2 ರವರಿಗೆ ಎಲ್ಲಿಲ್ಲಿ ಏಟುಗಳು ಆಗಿದ್ದವು ಎಂದು ನನಗೆ ಗೊತ್ತಿಲ್ಲ. ಗಲಾಟೆ ಆಗಿದೆ ಎನ್ನುವ ಸಮಯದಲ್ಲಿ ಚಾಸಾ -1 ನಿಡಸಾಲೆಗೆ ಹೋಗಿದ್ದರು.

ಯಾವುದಾದರೂ ಗಲಾಟೆ ಆದರೆ ನಮ್ಮ ಸಂಬಂಧಿಗಳಿಗೆ ಮೊದಲು ಕರೆ ಮಾಡುತ್ತೇವೆ. ಈ ಪ್ರಕರಣದಲ್ಲಿ ನಾನು ಮೊದಲು 100 ನಂಬರಗೆ ಕರೆ ಮಾಡಿದ್ದೇನೆ. ಮೊದಲು ನನ್ನ ಗಂಡ ಬಂದಿರುತ್ತಾರೆ. ನಂತರ ಪೋಲಿಸರು ಬಂದಿರುತ್ತಾರೆ. ಪೋಲಿಸರು ಸ್ಥಳಕ್ಕೆ 5 ರಿಂದ 10 ನಿಮಿಷದಲ್ಲಿ ಬಂದಿರುತ್ತಾರೆ. ಪೋಲಿಸರು ಬಂದ ಸಮಯಕ್ಕೆ ಸ್ಥಳದಲ್ಲಿ ಎಲ್ಲರೂ ಇದ್ದರು. ಪೋಲಿಸರು ಆ ಸಮಯದಲ್ಲಿ ಅವರನ್ನು ವಿಚಾರಣೆ ಮಾಡಿರುತ್ತಾರೆ. ಪೋಲಿಸರು ಸ್ಥಳಕ್ಕೆ ಬಂದಾಗ ಆರೋಪಿತರು ಇದ್ದರು ಎಂದು ದೂರಿನಲ್ಲಿ ನಮೂದು ಮಾಡಿರುವುದಿಲ್ಲ. ಪೋಲಿಸರು ಸ್ಥಳಕ್ಕೆ ಬಂದಾಗ ಅಕ್ಕಪಕ್ಕದ ಮನೆಯವರನ್ನು ವಿಚಾರಣೆ ಮಾಡಿರುತ್ತಾರೆ. ಅಶೋಕ ಅವರ ಅಂಗಡಿಗೂ ಆರೋಪಿತರ ಮನೆಗೂ 10 ಹೆಜ್ಜೆ ಅಂತರ ಇದೆ.

3 ಅಡಿ ಪ್ಯಾಸೇಜ್ ಇರುವ ಬಗ್ಗೆ ಸಂಬಂಧ ಪಟ್ಟ ಇಲಾಖೆಯವರು ಅಳತೆ ಮಾಡಿದ ದಾಖಲೆ ನೋಡಿಲ್ಲ. ನಮ್ಮ ಮತ್ತು ಆರೋಪಿತರ ಮನೆಯ ಪಂಚಾಯಿತಿ ದಾಖಲೆಗಳನ್ನು ನಾನು ನೋಡಿರುತ್ತೇನೆ . 3 ಅಡಿ ಪ್ಯಾಸೇಜನ್ನು ಒತ್ತುವರಿ ಮಾಡಿ ಕಟ್ಟಿರುವ ಬಗ್ಗೆ ಸಿವಿಲ್ ದಾವೆ ಸಲ್ಲಿಸಿಲ್ಲ.

ಘಟನೆ ಆದ ಎಷ್ಟು ದಿನಕ್ಕೆ ದೂರನ್ನು ನೀಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನನ್ನ ಪ್ರಕಾರ ನಮ್ಮ ಅತ್ತೆ ಘಟನೆ ಆದ 1 ವಾರಕ್ಕೆ ಮನೆಗೆ ಬಂದಿರುತ್ತಾರೆ. ಪೋಲಿಸರು ಸ್ಥಳಕ್ಕೆ ಬಂದಾಗ ನಾನು ಸಹಿ ಮಾಡಿರುತ್ತೇನೆ. ನಾನು ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಪೋಲಿಸ್ ಠಾಣೆಗೆ ಹೋಗಿರುತ್ತೇನೆ ದಿನಾಂಕ ನನಗೆ ನೆನಪಿಲ್ಲ. ಸ್ಥಳದಲ್ಲಿ ಸಹಿ ಮಾಡಿದ ನಂತರ ನಾನು ಪೊಲೀಸ್ ಠಾಣೆಗೆ ಹೋಗಿರುತ್ತೇನೆ. ಎಷ್ಟು ದಿನಗಳ ಬಳಿಕ ಪೋಲಿಸ್ ಠಾಣೆಗೆ ಹೋಗಿರುತ್ತೇನೆ ಎಂದು ನನಗೆ ಗೊತ್ತಿಲ್ಲ.

ದೂರು ನೀಡಿದ ದಿನ, ಪೋಲಿಸರು ಸ್ಥಳಕ್ಕೆ ಬಂದ ದಿನ ನಾನು ಪೋಲಿಸ್ ಠಾಣೆಗೆ ಹೋಗಿರುವುದಿಲ್ಲ. ದಿಃ 18.02.2022 ರಂದು ಯಾವುದೇ ಗಲಾಟೆ ಆಗಿರುವುದಿಲ್ಲ ದಿಃ 17.02.2022 ರಂದು ಆಗಿರುವ ಗಲಾಟೆ ವಿಚಾರವಾಗಿ ಆರೋಪಿತರು ದೂರನ್ನು ನೀಡಿರುತ್ತಾರೆ. ನಾವು ಪ್ರಕರಣಕ್ಕೆ ಹಾಜರಾಗುತ್ತಿದ್ದೇವೆ ಎಂದರೆ ಸರಿ. ಆರೋಪಿತರು ಮನೆ ಕಟ್ಟು ವಿಚಾರವಾಗಿ ನಾವು ತೊಂದರೆ ಕೊಟ್ಟ ಬಗ್ಗೆ ಅವರು ದೂರನ್ನು ನೀಡಿದ್ದು ಅದಕ್ಕೆ ಪ್ರತಿಯಾಗಿ ಚಾಸಾ-1 ಈ ದೂರನ್ನು ನೀಡಿದ್ದಾರೆ ಎಂದರೆ ಸರಿಯಲ್ಲ. ನ್ಯಾಯಾಲಯದ ಮುದೆ ಇರುವ ದೋಣ್ಣೆಯನ್ನು ನಾನು ನೀಡಿರುವುದಿಲ್ಲ. ಅದನ್ನು ಈ ದಿನವೇ ಮೊದಲು ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲಾ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ. ನನಗೆ ಪ್ರಕರಣದ ಬಗ್ಗೆ ಏನು ಮಾಹಿತಿ ಇಲ್ಲ. ಚಾಸಾ-1 ಹೇಳಿಕೊಟ್ಟಂತೆ ನಾನು ಬಂದು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಜವಾದ ಘಟನೆ ಆಗಿದ್ದಲ್ಲಿ ನಾನು ದೂರನ್ನು ನೀಡುತ್ತಿದ್ದೆ ಯಾವುದೇ ಘಟನೆ ಆಗದೇ ಇರುವ ಕಾರಣ ನಾನು ದೂರನ್ನುನೀಡಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ

ಸಹಿ/-

ಅಪರ ಹಿರಿಯ ವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ

ಕುಣಿಗಲ್.